**Press Coverage's of field day on "Biocontrol Strategies for Management of Invasive Whiteflies in Coconut"**

ICAR-NBAIR conducted a field day on *"Biocontrol Strategies for Management of Invasive Whiteflies in Coconut"* on 26th March, 2025 at Chikkanayakanahalli, Tumakuru district in collaboration with Department of Agriculture, Department of Karnataka under Coconut Development Board funded project on "*Generation of toxicological data for registration of Isaria fumosorosea in CIBRC and demonstration of biocontrol agents for management of Invasive Whiteflies in Coconut*". About 150 farmers participated and benefitted from the programme.

# ತೆಂಗಿನಲ್ಲಿ ಭಾದಿಸುತ್ತಿರುವ ಬಿಳಿನೊಣಗಳ ಜೈವಿಕ ನಿಯಂತ್ರಣ



ತೆಂಗು ಬೆಳೆಯಲ್ಲಿ ಭಾದಿಸುತ್ತಿರುವ ಅತಿಕ್ರಮಣಕಾರಿ ಬಿಳನೊಣಗಳ ನಿಯಂತ್ರಣಕ್ಕೆ ಶಾಸಕರಾದಂತಹ ಸಿ.ಬಿ.ಸುರೇಶ್ ಬಾಬು ರವರು ಹಾಗೂ ತೋಟಗಾರಿಕೆ, ಕೃಷಿ ಇಲಾಖೆಗಳ ಜೊತೆಗೂಡಿ ರೈತರಿಗೆ ಮಾಹಿತಿ ನೀಡುತ್ತಿರುವುದು.

ಕನ್ನಡನಾಡು ವಾರ್ತೆ

**ಹುಳಿಯಾರು, ಮಾ.27:** ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ತೆಂಗು ಬೆಳೆಯಲ್ಲಿ ಭಾದಿಸುತ್ತಿರುವ ಅತಿಕ್ರಮಣಕಾರಿ ಬಿಳನೊಣಗಳ ನಿಯಂತ್ರಣಕ್ಕೆ ಶಾಸಕರಾದಂತಹ ಸಿ.ಬಿ.ಸುರೇಶ್ ಬಾಬು ರವರು ಹಾಗೂ ತೋಟಗಾರಿಕೆ, ಕೃಷಿ ಇಲಾಖೆಗಳ ಜೊತೆಗೂಡಿ ರೈತರಿಗೆ ಆಸರೆಯಾಗುವಂತಹ ಕ್ರಮ ಕೈಗೊಳ್ಳಲಾಯಿತು.

ಕಳೆದೆರಡು ವರ್ಷಗಳಿಂದ ರೈತರನ್ನು ನಿದ್ದೆಗೆಡಿಸಿರುವ ತಾಳೆ ಮುತ್ತಿಕೊಳ್ಳುವ ಬಿಳಿನೊಣಗಳು ತೆಂಗಿನ ತೋಟಗಳನ್ನು ಆಕ್ರಮಣ ಮಾಡಿವೆ. ಇವು ರೂಗೂಸ್ ಜಾತೆಗೆ ಸೇರಿದ್ದು, ಸುರುಳಿ ಬಿಳಿನೊಣಗಳನ್ನೆಲಾಗಿದೆ. ಇವು ಹೆಚ್ಚು ಪ್ರಬಲ, ಅಕ್ರಮಣಕಾರಿ, ಹೊಟ್ಟೆಬಾಕತನ ರಸ ಹೀರುವ ಕೀಟವಾಗಿದೆ.

ಮರಿಗಳು ಹಾಗೂ ಪ್ರೌಢ ಕೀಟಗಳು ಸತತವಾಗಿ ಗರಿಗಳ ಕೆಳಭಾಗದಲ್ಲಿ ಕುಳಿತು ರಸ ಹೀರುವಿಕೆಯಿಂದ ಗಿಡಗಳ ಗರಿಗಳು ಹಳದಿಯಾಗಿ ಒಣಗಿ ನಾಶವಾಗುತ್ತದೆ. ಮರಿ ಹಂತಗಳು ಸಿಹಿಯಾದ ಜೇನಿನ ತರಹದ ದ್ರಾವಣವನ್ನು ವಿಸರ್ಜನೆ ಮಾಡುವುದರಿಂದ ಎಲೆಯ ಮೇಲ್ಭಾಗದ ಮೇಲೆ ಕಪ್ಪು ಬಣ್ಣದ ಶಿಲೀಂದ್ರ ಬೆಳೆದು ಎಲೆಗಳು ಕಪ್ಪು ಬಣ್ಣಕ್ಕೆ ತಿರುಗುವುದರಿಂದ ಎಲೆಗಳಲ್ಲಿ ದ್ಯುತಿ ಸಂಶ್ಲೇಷಣೆ ಕ್ರಿಯೆ ಕಡಿಮೆಯಾಗುತ್ತದೆ ಮತ್ತು ಅದರ ಪರಿಣಾಮ ತೆಂಗಿನ ಇಳುವರಿ ಮೇಲೆ ಉಂಟಾಗುತ್ತದೆ. ವಿಶಿಷ್ಟ ಕೇಂದ್ರೀಕೃತ ಮೇಣದ ಸುರುಳಿಯಾಕಾರದ ಲಕ್ಷಣಗಳನ್ನು ಎಲೆಗಳ ಮೇಲೆ ಮಾತ್ರವಲ್ಲದೆ ತೆಂಗಿನಕಾಯಿಯ ಕಾಂಡದ, ಹಣ್ಣಿನ, ತೆಂಗಿನ ಕಾಯಿಗಳಲ್ಲೂ ಸಹ ಗಮನಿಸಬಹುದು.

ತಾಲ್ಲೂಕು ಇಲಾಖಾಧಿಕಾರಿಗಳು ಹಾಗೂ ವಿಜ್ಞಾನಿಗಳು ಜೊತೆಗೂಡಿ ರೂಗೂಸ್ ಬಿಳಿ ನೊಣದ ಜೈವಿಕ ನಿಯಂತಣ ಅತ್ಯಂತ ಸಮಂಜಸ ಪರಿಹಾರವಾಗಿರುವ ಕಾರಣ ತಾಲ್ಲೂಕಿನ ಶಾಸಕರ ಮಾರ್ಗದರ್ಶನದಲ್ಲಿ ಹುಳಿಯಾರು ಕಂದಿಕೆರೆ ಗ್ರಾಮದಲ್ಲಿ ನೈಸರ್ಗಿಕ ಕೀಟಗಳಾದ ಐಸಿ-ರಿಯ ಫ್ಯೂಮೋಸೋರೋಸಿಯಸ್ ಪ್ರಭೇಧದ ಶೀಲೀದ್ರ ಮತ್ತು ಎನ್ಕಾರ್ಷಿಯಾ ಡಿಸ್ಪರ್ಸಾ- ಪರಭಕ್ಷಕ ಜೀವಿಗಳ ಸಿಂಪರಣೆಯನ್ನು ಡ್ರೋನ್ ಹಾಗೂ ಪವರ್ ಸ್ಪ್ರೇಯರ್ ಮೂಲಕ ಕೈಗೊಂಡು ರೈತಾಪಿ ವರ್ಗದವರಲ್ಲಿ ಆಶಾದಾಯಕ ಭಾವನೆ ಮೂಡಿಸುವಲ್ಲಿ ಮೊದಲನೆಯ ಹೆಜ್ಜೆ ಇಟ್ಟಂತಾಗಿದೆ. ICAR-NBAIR ವಿಜ್ಞಾನಿಗಳಾದ ಸೆಲ್ವರಾಜ್.ಕೆ, ಶೈಲೇಶ್.ಎ.ಎನ್. ಮಂಜುನಾಥ ರವರ ಉಪಸ್ಥಿತಿಯಲ್ಲಿ ಕೈಗೊಳ್ಳಲಾಯಿತು. ಸ್ಥಳದಲ್ಲಿ ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ರಾಜಪ್ಪ, ಸಹಾಯಕ ಕೃಷಿ ನಿರ್ದೇಶಕರಾದ ಶಿವರಾಜ್ ಕುಮಾರ್.ಹೆಚ್.ಎಸ್. ಹಾಗೂ ಕೃಷಿ ಇಲಾಖಾ ಅಧಿಕಾರಿಗಳು ಹಾಜರಿದ್ದರು.

**Date: 27.03.2025; Kannada Nadu (Kannada)**

ತುಮಕೂರು ವಾರ್ತೆ
PAGE 05
28 Mar 2025

# ತೆಂಗಿನಲ್ಲಿ ಬಿಳಿನೊಣಗಳ ಕಾಟ ತಡೆಗೆ ಕ್ರಮ

**ಹುಳಿಯಾರು:** ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ತೆಂಗು ಬೆಳೆಯಲ್ಲಿ ಭಾದಿಸುತ್ತಿರುವ ಅತಿಕ್ರಮಣಕಾರಿ ಬಿಳಿನೊಣಗಳ ನಿಯಂತ್ರಣಕ್ಕೆ ಶಾಸಕ ಸಿ.ಬಿ.ಸುರೇಶ್ ಬಾಬು ಹಾಗೂ ತೋಟಗಾರಿಕೆ, ಕೃಷಿ ಇಲಾಖೆಗಳ ಜೊತೆಗೂಡಿ ರೈತರಿಗೆ ಆಸರೆಯಾಗುವಂತಹ ಕ್ರಮ ಕೈಗೊಳ್ಳಲಾಯಿತು.



ಕಳೆದೆರಡು ವರ್ಷಗಳಿಂದ ರೈತರನ್ನು ನಿದ್ದೆಗೆಡಿಸಿರುವ ತಾಳೆ ಮುತ್ತಿಕೊಳ್ಳುವ ಬಿಳಿನೊಣಗಳು ತೆಂಗಿನ ತೋಟಗಳನ್ನು ಆಕ್ರಮಣ ಮಾಡಿವೆ. ಇವು ರೂಗೂಸ್ ಜಾತಿಗೆ ಸೇರಿದ್ದು, ಸುರುಳಿ ಬಿಳಿನೊಣಗಳನ್ನೆಲಾಗಿದೆ. ಇವು ಹೆಚ್ಚು ಪ್ರಬಲ, ಅಕ್ರಮಣಕಾರಿ, ಹೊಟ್ಟೆಬಾಕತನ ರಸ ಹೀರುವ ಕೀಟವಾಗಿದೆ.

ಮರಿಗಳು ಹಾಗೂ ಪ್ರೌಢ ಕೀಟಗಳು ಸತತವಾಗಿ ಗರಿಗಳ ಕೆಳಭಾಗದಲ್ಲಿ ಕುಳಿತು ರಸ ಹೀರುವಿಕೆಯಿಂದ ಗಿಡಗಳ ಗರಿಗಳು ಹಳದಿಯಾಗಿ ಒಣಗಿ ನಾಶವಾಗುತ್ತದೆ. ಮರಿ ಹಂತಗಳು ಸಿಹಿಯಾದ ಜೇನಿನ ತರಹದ ದ್ರಾವಣ ವಿಸರ್ಜನೆ ಮಾಡುವುದರಿಂದ ಎಲೆಯ ಮೇಲ್ಭಾಗದ ಮೇಲೆ ಕಪ್ಪು ಬಣ್ಣದ ಶಿಲೀಂದ್ರ ಬೆಳೆದು ಎಲೆಗಳು ಕಪ್ಪು ಬಣ್ಣಕ್ಕೆ ತಿರುಗುವುದರಿಂದ ಎಲೆಗಳಲ್ಲಿ ದ್ಯುತಿ ಸಂಶ್ಲೇಷಣೆ ಕ್ರಿಯೆ ಕಡಿಮೆಯಾಗುತ್ತದೆ ಮತ್ತು ಅದರ ಪರಿಣಾಮ ತೆಂಗಿನ ಇಳುವರಿ ಮೇಲೆ ಉಂಟಾಗುತ್ತದೆ, ವಿಶಿಷ್ಟ ಕೇಂದ್ರಿಕೃತ ಮೇಣದ ಸುರುಳಿಯಾಕಾರದ ಲಕ್ಷಣಗಳನ್ನು ಎಲೆಗಳ ಮೇಲೆ ಮಾತ್ರವಲ್ಲದೆ ತೆಂಗಿನಕಾಯಿಯ ಕಾಂಡದ, ಹಣ್ಣಿನ, ತೆಂಗಿನ ಕಾಯಿಗಳಲ್ಲೂ ಸಹ ಗಮನಿಸಬಹುದು.

ತಾಲ್ಲೂಕು ಇಲಾಖಾಧಿಕಾರಿಗಳು ಹಾಗೂ ವಿಜ್ಞಾನಿಗಳು ಜೊತೆಗೂಡಿ ರೂಗೂಸ್ ಬಿಳಿ ನೊಣದ ಜೈವಿಕ ನಿಯಂತ್ರಣ ಅತ್ಯಂತ ಸಮಂಜಸ ಪರಿಹಾರವಾಗಿರುವ ಕಾರಣ ತಾಲ್ಲೂಕಿನ ಶಾಸಕರ ಮಾರ್ಗದರ್ಶನದಲ್ಲಿ ಹುಳಿಯಾರು ಕಂದಿಕೆರೆ ಗ್ರಾಮದಲ್ಲಿ ನೈಸರ್ಗಿಕ ಕೀಟಗಳಾದ ಐಸಿರಿಯ ಪ್ಯೂಮೋಸೋರೋಸಿಯಸ್ ಪ್ರಭೇದದ ಶಿಲೀಂದ್ರ ಮತ್ತು ಎನ್ಯಾಷಿ ರ್ಯಾ ಡಿಸ್ಪರ್ಸಾ- ಪರಭಕ್ಷಕ ಜೀವಿಗಳ ಸಿಂಪಡಣೆಯನ್ನು ಡ್ರೋನ್ ಹಾಗೂ ಪವರ್ ಸ್ಪ್ರೇಯರ್ ಮೂಲಕ ಕೈಗೊಂಡು ರೈತಾಪಿ ವರ್ಗದವರಲ್ಲಿ ಆಶಾದಾಯಕ ಭಾವನೆ ಮೂಡಿಸುವಲ್ಲಿ ಮೊದಲನೆಯ ಹೆಜ್ಜೆ ಇಟ್ಟಂತಾಗಿದೆ.

ವಿಜ್ಞಾನಿಗಳಾದ ಸೆಲ್ವರಾಜ್.ಕೆ, ಶೈಲೇಶ್.ಎ.ಎನ್, ಮಂಜುನಾಥ ಅವರ ಉಪಸ್ಥಿತಿಯಲ್ಲಿ ಕೈಗೊಳ್ಳಲಾಯಿತು, ಸ್ಥಳದಲ್ಲಿ ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ರಾಜಪ್ಪ, ಸಹಾಯಕ ಕೃಷಿ ನಿರ್ದೇಶಕ ಶಿವರಾಜ್ ಕುಮಾರ್.ಹೆಚ್.ಎಸ್. ಹಾಗೂ ಕೃಷಿ ಇಲಾಖಾ ಅಧಿಕಾರಿಗಳು ಹಾಜರಿದ್ದರು.

ನಿರ್ವಹಣೆ ತಂತ್ರಗಳು

ವಿವಿಧ ಆಸರೆ ಸಸ್ಯಗಳ ಮೇಲೆ ಬಿಳಿನೊಣ ಮತ್ತು ನೈಸರ್ಗಿಕ ಪರಾವಲಂಬಿ ಕಣಜಗಳ ಬಗ್ಗೆ ನಿರಂತರ ಗಮನ ಹರಿಸುವುದು, ಮುಖ್ಯವಾಗಿ ತೆಂಗಿನ ಸಸಿಗಳನ್ನು ಹಾಗೂ ಬಿಳಿನೊಣ ಹರಡಿರುವ ಪ್ರದೇಶಗಳಿಂದ ಯಾವುದೇ ಅಲಂಕಾರಿಕ ಸಸ್ಯಗಳ ಸಾಗಾಣಿಕೆ ತಪ್ಪಿಸಬೇಕು.

ಕೀಟನಾಶಕಗಳ ಬಳಕೆ ಬಿಳಿನೊಣ ನಿಯಂತ್ರಣಕ್ಕೆ ಹೆಚ್ಚು ಸಹಕಾರಿಯಲ್ಲ ಹಾಗಾಗಿ ನೈಸರ್ಗಿಕ ಶತ್ರುಗಳು ಹಾಗೂ ಪರಾವಲಂಬಿ ಜೀವಿಗಳನ್ನು ಹೆಚ್ಚಿಸಲು ಅನಧಿಕೃತ ಕೀಟನಾಶಕಗಳ ಬಳಕೆ ತಪ್ಪಿಸಬೇಕು.

ತೀವ್ರವಾಗಿ ಬಿಳಿನೊಣ ಹರಡಿದ ಮತ್ತು ನೈಸರ್ಗಿಕ ಪರಾವಲಂಜಿ ಕೀಟಗಳ ಅನುಪಸ್ಥಿತಿಯಲ್ಲಿ ಶೇ.1ರಷ್ಟು ಬೇವಿನ ಎಣ್ಣೆಯನ್ನು ಸ್ವಲ್ಪ ಸಾಬೂನಿನ ದ್ರಾವಣದಲ್ಲಿ ಕರಗಿಸಿ ಸಿಂಪಡಿಸಬೇಕು 15 ದಿನಗಳ ಅಂತರದಲ್ಲಿ ಪುನರಾವರ್ತಿಸಬೇಕು.

ಇದೀಗ ಹೊಸದಾಗಿ ಜೈವಿಕ ಶಿಲೀಂದ್ರ ಐಸಿರಿಯ ಪ್ಯೂಮೋಸೋರೋಸಿಯಸ್ (5ಗ್ರಾಂ, ಲೀಟರ್) ಬಳಸಿ ಪ್ರೌಢ ಹಾಗೂ ಮರಿಗಳನ್ನು ನಾಶ ಮಾಡುವ ತಂತ್ರಜ್ಞಾನ ಉಪಲಬ್ಧವಿದೆ. ಈ ಶಿಲೀಂದ್ರ ಬಳಸುವುದರಿಂದ ಸಾಕಷ್ಟು ಪ್ರಮಾಣದಲ್ಲಿ ಬಿಳಿನೊಣಗಳ ನಿಯಂತ್ರಣ ಮಾಡಬಹುದು. ಹೆಚ್ಚಿನ ನೀರಿನ ಪ್ರಮಾಣ ಉಪಲಬ್ಧವಿದ್ದಲ್ಲಿ ಹದಿನೈದು ದಿನಗಳ ಅಂತರದಲ್ಲಿ ನೀರಿಗೆ ಸ್ವಲ್ಪ ಸಾಬೂನಿನ ದ್ರಾವಣ ಬೆರೆಸಿ ಸಿಂಪಡಿಸಬೇಕು ಇದರಿಂದ ಎಲೆಗಳ ಹಿಂಬಾಗದಲ್ಲಿರುವ ಬಿಳಿನೊಣ ಮತ್ತು ಬಿಳಿನೊಣದ ಮರಿಗಳ ಸಂಖ್ಯೆ ಕಡಿಮೆ ಮಾಡಬಹುದು.

**Date: 28.03.2025; Tumkur Varthe (Kannada)**

ವಿಶ್ವ ಕನ್ನಡಿ
VISHWA KANNADI
Kannada daily
Vishwa kannadi 28.03.2025-page-004
28 Mar 2025

# ತೆಂಗಿನಲ್ಲಿ ಭಾದಿಸುತ್ತಿರುವ ಬಿಳಿನೊಣಗಳ ಜೈವಿಕ ನಿಯಂತ್ರಣ

**ಹುಳಿಯಾರು:** ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ತೆಂಗು ಬೆಳೆಯಲ್ಲಿ ಭಾದಿಸುತ್ತಿರುವ ಅತಿಕ್ರಮಣಕಾರಿ ಬಿಳನೊಣಗಳ ನಿಯಂತ್ರಣಕ್ಕೆ ಶಾಸಕರಾದಂತಹ ಸಿ.ಬಿ.ಸುರೇಶ್ ಬಾಬು ರವರು ಹಾಗೂ ತೋಟಗಾರಿಕೆ, ಕೃಷಿ ಇಲಾಖೆಗಳ ಜೊತೆಗೂಡಿ ರೈತರಿಗೆ ಆಸರೆಯಾಗುವಂತಹ ಕ್ರಮ ಕೈಗೊಳ್ಳಲಾಯಿತು. ಕಳೆದೆರಡು ವರ್ಷಗಳಿಂದ ರೈತರನ್ನು ನಿದ್ದೆಗೆಡಿಸಿರುವ ತಾಳೆ ಮುತ್ತಿಕೊಳ್ಳುವ ಬಿಳಿನೊಣಗಳು ತೆಂಗಿನ ತೋಟಗಳನ್ನು ಆಕ್ರಮಣ ಮಾಡಿವೆ. ಇವು ರೂಗೂಸ್ ಜಾತಿಗೆ ಸೇರಿದ್ದು, ಸುರುಳಿ ಬಿಳಿನೊಣಗಳನ್ನೆಲಾಗಿದೆ.



ಇವು ಹೆಚ್ಚು ಪ್ರಬಲ, ಅಕ್ರಮಣಕಾರಿ, ಹೊಟ್ಟೆಬಾಕತನ ರಸ ಹೀರುವ ಕೀಟವಾಗಿದೆ. ಮರಿಗಳು ಹಾಗೂ ಪ್ರೌಢ ಕೀಟಗಳು ಸತತವಾಗಿ ಗರಿಗಳ ಕೆಳಭಾಗದಲ್ಲಿ ಕುಳಿತು ರಸ ಹೀರುವಿಕೆಯಿಂದ ಗಿಡಗಳ ಗರಿಗಳು ಹಳದಿಯಾಗಿ ಒಣಗಿ ನಾಶವಾಗುತ್ತದೆ. ಮರಿ ಹಂತಗಳು ಸಿಹಿಯಾದ ಜೇನಿನ ತರಹದ ದ್ರಾವಣವನ್ನು ವಿಸರ್ಜನೆ ಮಾಡುವುದರಿಂದ ಎಲೆಯ ಮೇಲ್ಭಾಗದ ಮೇಲೆ ಕಪ್ಪು ಬಣ್ಣದ ಶಿಲೀಂದ್ರ ಬೆಳೆದು ಎಲೆಗಳು ಕಪ್ಪು ಬಣ್ಣಕ್ಕೆ ತಿರುಗುವುದರಿಂದ ಎಲೆಗಳಲ್ಲಿ ದ್ಯುತಿ ಸಂಶ್ಲೇಷಣೆ ಕ್ರಿಯೆ ಕಡಿಮೆಯಾಗುತ್ತದೆ ಮತ್ತು ಅದರ ಪರಿಣಾಮ ತೆಂಗಿನ ಇಳುವರಿ ಮೇಲೆ ಉಂಟಾಗುತ್ತದೆ.

ವಿಶಿಷ್ಟಕೇಂದ್ರೀಕೃತ ಮೇಣದ ಸುರುಳಿಯಾಕಾರದ ಲಕ್ಷಣಗಳನ್ನು ಎಲೆಗಳ ಮೇಲೆ ಮಾತ್ರವಲ್ಲದೆ ತೆಂಗಿನಕಾಯಿಯ ಕಾಂಡದ, ಹಣ್ಣಿನ, ತೆಂಗಿನ ಕಾಯಿಗಳಲ್ಲೂ ಸಹ ಗಮನಿಸಬಹುದು. ತಾಲ್ಲೂಕು ಇಲಾಖಾಧಿಕಾರಿಗಳು ಹಾಗೂ ವಿಜ್ಞಾನಿಗಳು ಜೊತೆಗೂಡಿ ರೂಗೂಸ್ ಬಿಳಿ ನೊಣದ ಜೈವಿಕ ನಿಯಂತಣ ಅತ್ಯಂತ ಸಮಂಜಸ ಪರಿಹಾರವಾಗಿರುವ ಕಾರಣ ತಾಲ್ಲೂಕಿನ ಶಾಸಕರ ಮಾರ್ಗದರ್ಶನದಲ್ಲಿ ಹುಳಿಯಾರು ಕಂದಿಕೆರೆ ಗ್ರಾಮದಲ್ಲಿ ನೈಸರ್ಗಿಕ ಕೀಟಗಳಾದ ಐಸಿರಿಯ ಪ್ಯೂಮೋಸೋರೋಸಿಯಸ್ ಪ್ರಭೇಧದ ಶೀಲೀದ್ರ ಮತ್ತು ಎನ್ಯಾರ್ಷಿಯಾ ಡಿಸ್ಪರ್ಸಾ- ಪರಭಕ್ಷಕ ಜೀವಿಗಳ ಸಿಂಪರಣೆಯನ್ನು ಡ್ರೋನ್ ಹಾಗೂ ಪವರ್ ಸ್ಪ್ರೇಯರ್ ಮೂಲಕ ಕೈಗೊಂಡು ರೈತಾಪಿ ವರ್ಗದವರಲ್ಲಿ ಆಶಾದಾಯಕ ಭಾವನೆ ಮೂಡಿಸುವಲ್ಲಿ ಮೊದಲನೆಯ ಹೆಜ್ಜೆ ಇಟ್ಟಂತಾಗಿದೆ. ICAR-NBAIR ವಿಜ್ಞಾನಿಗಳಾದ ಸೆಲ್ವರಾಜ್.ಕೆ, ಶೈಲೇಶ್.ಎ.ಎನ್. ಮಂಜುನಾಥ ರವರ ಉಪಸ್ಥಿತಿಯಲ್ಲಿ ಕೈಗೊಳ್ಳಲಾಯಿತು. ಸ್ಥಳದಲ್ಲಿ ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ರಾಜಪ್ಪ, ಸಹಾಯಕ ಕೃಷಿ ನಿರ್ದೇಶಕರಾದ ಶಿವರಾಜ್ ಕುಮಾರ್.ಹೆಚ್.ಎಸ್. ಹಾಗೂ ಕೃಷಿ ಇಲಾಖಾ ಅಧಿಕಾರಿಗಳು ಹಾಜರಿದ್ದರು.

## ನಿರ್ವಹಣೆ ತಂತ್ರಗಳು:

1. ವಿವಿಧ ಆಸರೆ ಸಸ್ಯಗಳ ಮೇಲೆ ಬಿಳಿನೊಣ ಮತ್ತು ನೈಸರ್ಗಿಕ ಪರಾವಲಂಬಿ ಕಣಜಗಳ ಬಗ್ಗೆ ನಿರಂತರ ಗಮನ ಹರಿಸುವುದು, ಮುಖ್ಯವಾಗಿ ತೆಂಗಿನ ಸಸಿಗಳನ್ನು ಹಾಗೂ ಬಿಳನೊಣ ಹರಡಿರುವ ಪ್ರದೇಶಗಳಿಂದ ಯಾವುದೇ ಅಲಂಕಾರಿಕ ಸಸ್ಯಗಳ ಸಾಗಾಣಿಕೆಯನ್ನು ತಪ್ಪಿಸಬೇಕು.
2. ಕೀಟನಾಶಕಗಳ ಬಳಕೆ ಬಿಳಿನೊಣ ನಿಯಂತ್ರಣಕ್ಕೆ ಹೆಚ್ಚು ಸಹಕಾರಿಯಲ್ಲ ಹಾಗಾಗಿ ನೈಸರ್ಗಿಕ ಶತ್ರುಗಳು ಹಾಗೂ ಪರಾವಲಂಬಿ ಜೀವಿಗಳನ್ನು ಹೆಚ್ಚಿಸಲು ಅನಧಿಕೃತ ಕೀಟನಾಶಕಗಳ ಬಳಕೆಯನ್ನು ತಪ್ಪಿಸಬೇಕು.
3. ತೀವ್ರವಾಗಿ ಬಿಳಿನೊಣ ಹರಡಿದ ಮತ್ತು ನೈಸರ್ಗಿಕ ಪರಾವಲಂಜಿ ಕೀಟಗಳ ಅನುಪಸ್ಥಿತಿಯಲ್ಲಿ ಶೇ.1ರಷ್ಟು ಬೇವಿನ ಎಣ್ಣೆಯನ್ನು ಸ್ವಲ್ಪ ಸಾಬೂನಿನ ದ್ರಾವಣದಲ್ಲಿ ಕರಗಿಸಿ ಸಿಂಪಡಿಸಬೇಕು15 ದಿನಗಳ ಅಂತರದಲ್ಲಿ ಪುನರಾವರ್ತಿಸಬೇಕು.
4. ಇದೀಗ ಹೊಸದಾಗಿ ಜೈವಿಕ ಶಿಲೀಂದ್ರ ಐಸಿರಿಯ ಪ್ಯೂಮೋಸೋರೋಸಿಯಸ್ (5ಗ್ರಾಂ/ಲೀಟರ್) ಬಳಸಿ ಪ್ರೌಢ ಹಾಗೂ ಮರಿಗಳನ್ನು ನಾಶ ಮಾಡುವ ತಂತ್ರಜ್ಞಾನ ಉಪಲಬ್ಧವಿದೆ. ಈ ಶಿಲೀಂಧ್ರವನ್ನು ಬಳಸುವುದರಿಂದ ಸಾಕಷ್ಟು ಪ್ರಮಾಣದಲ್ಲಿ ಬಿಳಿನೊಣಗಳ ನಿಯಂತ್ರಣ ಮಾಡಬಹುದು.
5. ಹೆಚ್ಚಿನ ನೀರಿನ ಪ್ರಮಾಣ ಉಪಲಬ್ಧವಿದ್ದಲ್ಲಿ ಹದಿನೈದು ದಿನಗಳ ಅಂತರದಲ್ಲಿ ನೀರಿಗೆ ಸ್ವಲ್ಪ ಸಾಬೂನಿನ ದ್ರಾವಣ ಬೆರೆಸಿ ಸಿಂಪಡಿಸಬೇಕು ಇದರಿಂದ ಎಲೆಗಳ ಹಿಂಬಾಗದಲ್ಲಿರುವ ಬಿಳಿನೊಣ ಮತ್ತು ಬಿಳಿನೊಣದ ಮರಿಗಳ ಸಂಖ್ಯೆಯನ್ನು ಕಡಿಮೆಮಾಡಬಹುದು.

**Date: 28.03.2025; Vishwa Kannadi (Kannada**